# ಚಿತ್ರದುರ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.,ಚಿತ್ರದುರ್ಗ

**ಡಿ.ಸಿ ಆಫೀಸ್ ರೋಡ್ ಚಿತ್ರದುರ್ಗ-577501**

ನೇರನೇಮಕಾತಿಗಾಗಿ ಅಭ್ಯರ್ಥಿಗಳು **Online** ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ತಿಳಿದುಕೊಳ್ಳತಕ್ಕದ್ದು.

ಹಂತ 1:- ಅಭ್ಯರ್ಥಿಗಳು ಬ್ಯಾಂಕಿನ ಅಧಿಕೃತ ವೆಬ್ ಸೈಟ್ **www.chitradurgadccbank.com** ಅನ್ನು ತೆರೆದ ಕೂಡಲೆ ಕಂಪ್ಯೂಟರ್ ಪರದೆಯ ಮೇಲೆ **CDCCB BANK RECRUITMENT 2023** ಎಂದು ಮೂಡುತ್ತದೆ. ಇದನ್ನು ಕ್ಲಿಕ್ ಮಾಡಿದಾಗ ಸೇವೆ **tab** ಗಳು ಕಾಣುತ್ತದೆ, ಇದರಲ್ಲಿ ಅನ್ ಲೈನ್ ಅರ್ಜಿಯನ್ನು ಭರ್ತಿ ಮಾಡುವ ಪೂರ್ವದಲ್ಲಿ ಅಧಿಸೂಚನೆ ಮತ್ತು ಸೂಚನೆಗಳನ್ನು ಕಡ್ಡಾಯವಾಗಿ ಓದತಕ್ಕದ್ದು ಮತ್ತು ಅಂತಿಮವಾಗಿ ನಿಯಮ ಮತ್ತು ಷರತ್ತುಗಳನ್ನು ಕೆಳಗಿನ ಚೆಕ್ ಬಾಕ್ಸ್ ಅನ್ನು ಒತ್ತುವ ಮೂಲಕ ಒಪ್ಪಿಕೊಳ್ಳತಕ್ಕದ್ದು ಮತ್ತು **Open Application** ಗುಂಡಿಯನ್ನು ಒತ್ತಿ ಮುಂದುವರಿಯಿರಿ.

ಹಂತ 2:- ಅಭ್ಯರ್ಥಿಗಳು ನೊಂದಣಿ ಮಾಡಿಕೊಳ್ಳಲು ಹಾಗೂ **Login** ಲಾಗಿನ್ ರುಜುವಾತುಗಳಿಗೆ ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿರುವಂತೆ ಹೆಸರು,ಜನ್ಮ ದಿನಾಂಕ ಮತ್ತು ಮೀಸಲಾತಿಗೆ ಸಂಬಂಧಿಸಿದಂತೆ ವರ್ಗ, ಮಾಜಿ ಸೈನಿಕ, ಅಂಗವಿಕಲ ಮತ್ತು ವಿಧವೆ ಮಹಿಳೆ ಮೀಸಲಾತಿಗೆ ಸಂಬಂಧಿಸಿದಂತೆ ಅನ್ವಯವಾಗುವ ಮೀಸಲಾತಿಯನ್ನು ಕ್ಲಿಕ್ಕಿಸಿ,ಮೊಬೈಲ್ ನಂಬರ್ ನೀಡಿ **Get OTP** ಗುಂಡಿಯನ್ನು ಒತ್ತಿದಾಗ ನೀವು ನೀಡಿದ ಮೊಬೈಲ್ ನಂಬರ್‌ಗೆ ಬಂದ **OTP** ಅನ್ನು ಹಾಕಿ **Register** ಮಾಡಿಕೊಳ್ಳತಕ್ಕದ್ದು ಅಂದರೆ ನೊಂದಣಿ ಮಾಡಿಕೊಳ್ಳತಕ್ಕದ್ದು.

ಹಂತ 3:- ನಿಮ್ಮ ನೊಂದಣಿ ಸಂಖ್ಯೆ, ಹುಟ್ಟಿದ ದಿನಾಂಕ ನಮೂದಿಸುವ ಮೂಲಕ **Login** ಲಾಗಿನ್ ಆಗಿ, ಅಭ್ಯರ್ಥಿಗಳ ವಿವರದಲ್ಲಿರುವ ಎಲ್ಲಾ ಮಾಹಿತಿಯನ್ನು ಮತ್ತು ವಿದ್ಯಾರ್ಹತೆ ಅಂಕಗಳ ಮಾಹಿತಿಯನ್ನು ನೀಡಿದ ನಂತರ **Proceed** ಗುಂಡಿ ಒತ್ತಿದಾಗ ನಿಮ್ಮ ಅರ್ಜಿಯಲ್ಲಿನ ವಿವರಗಳ ಬದಲಾವಣೆ ಅಗತ್ಯವಿದ್ದರೆ **Edit** ಗುಂಡಿಯನ್ನು ಒತ್ತಿ, ಅರ್ಜಿಯಲ್ಲಿನ ವಿವರಗಳನ್ನು ಸರಿಪಡಿಸಿ, ಸರಿ ಇರುವ ಬಗ್ಗೆ **Preview** ನಲ್ಲಿ ಖಚಿತಪಡಿಸಿಕೊಂಡು ನಂತರ ಅರ್ಜಿಗೆ ಸಂಬಂದಿಸಿದ ಎಲ್ಲಾ ವಿವರಗಳ ಬಗ್ಗೆ ಸ್ವಯಂ ಘೋಷಣೆಯ ಚೆಕ್ ಬಾಕ್ಸ್‌ನ್ನು ಒತ್ತಿ **Submit** ಮಾಡತಕ್ಕದ್ದು. ಒಮ್ಮೆ **Submit** ಮಾಡಿದ ನಂತರ ಅರ್ಜಿಯಲ್ಲಿನ ಯಾವುದೇ ಮಾಹಿತಿ ಬದಲಾವಣೆಗೆ ಅವಕಾಶವಿರುವುದಿಲ್ಲ.

ಹಂತ 4:-ಅಭ್ಯರ್ಥಿಯ **photo** ಮತ್ತು **Signature** ಅಪ್ ಲೋಡ್ ಗುಂಡಿಯನ್ನು ಅದುಮಿ, ಅವರ ಸಹಿಯೊಂದಿಗೆ ಭಾವಚಿತ್ರವನ್ನು **jpg Format** ನಲ್ಲಿ ಅಪ್‌ಲೋಡ್ ಮಾಡತಕ್ಕದು. ಅಪಲೋಡ್ ಮಾಡಿದ ಸಹಿ ಮತ್ತು ಭಾವಚಿತ್ರ ತಪ್ಪಾದಲ್ಲಿ ಅದನ್ನು ಮತ್ತೊಮ್ಮೆ ಅಪ್‌ಲೋಡ್ ಮಾಡತಕ್ಕದ್ದು. ಒಂದು ವೇಳೆ ಅಭ್ಯರ್ಥಿಯು ತಮ್ಮ ಭಾವಚಿತ್ರ ಮತ್ತು ಸಹಿಯನ್ನು ಅಪ್ ಲೋಡ್ ಮಾಡದಿದ್ದರೆ ಅವರ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
(ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಅಭ್ಯರ್ಥಿಯು ತನ್ನ ಇತ್ತೀಚಿನ ಭಾವಚಿತ್ರವನ್ನು ಖಾಲಿ ಬಿಳಿ ಕಾಗದದ ಮೇಲೆ ಇರಿಸಿ. ನಕ್ಷೆ/ಮಾರ್ಕರ್ ಪೆನ್ನಿನಿಂದ ಸರಿಯಾಗಿ ಭಾವಚಿತ್ರದ ಕೆಳಗೆ ಸಹಿ ಮಾಡಿರುವುದನ್ನು ಮತ್ತು ಅಂಕಣದೊಳಗೆ ಇರುವುದನ್ನು ಖಚಿತಪಡಿಸಿಕೊಳ್ಳುವುದು. ಯಾವುದೇ ಕಾರಣಕ್ಕೂ ಭಾವಚಿತ್ರದ ಮೇಲೆ ಸಹಿ ಮಾಡಬಾರದು)

ನಂತರ ಜನ್ಮ ದಿನಾಂಕದ ದೃಡೀಕರಣಕ್ಕಾಗಿ ನೀವು ಎಸ್.ಎಸ್.ಎಲ್.ಸಿ ಅಂಕಪಟ್ಟಿ/ಶಾಲಾ ವರ್ಗಾವಣೆ ಪ್ರಮಾಣಪತ್ರ/ಕ್ಯೂಮುಲೆಟಿವ್ ರೆಕಾರ್ಡ್‌ನ್ನು ಮತ್ತು ಕೋರಿದ ಮೀಸಲಾತಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು ಹಾಗೂ ಹುದ್ದೆಗೆ ಸಂಬಂಧಿಸಿದ ಅಂಕಪಟ್ಟಿಗಳನ್ನು **Pdf Format** ನಲ್ಲಿ ಅಪ್‌ಲೋಡ್ ಮಾಡಿದ ನಂತರ **Submit** ಮಾಡತಕ್ಕದ್ದು.

ಹಂತ 5:- ಅಭ್ಯರ್ಥಿಯು ಸಂಬಂಧಪಟ್ಟ ವಿದ್ಯಾರ್ಹತೆ, ಜಾತಿ ಪ್ರಮಾಣಪತ್ರ, ಅಂಗವಿಕಲ ದೃಡೀಕರಣ ಪತ್ರ, ಕನ್ನಡ ಮಾಧ್ಯಮ ಪ್ರಮಾಣ ಪತ್ರ, ಗ್ರಾಮೀಣ ಪ್ರಮಾಣಪತ್ರ ಮತ್ತು ಮಾಜಿ ಸೈನಿಕ, ವಿಧವೆಯರಿಗೆ ಸಕ್ಷಮ ಪ್ರಾಧಿಕಾರ ನೀಡಿರುವ ಪ್ರಮಾಣಪತ್ರದ ನಕಲು ಪ್ರತಿಗಳಿಗೆ ಗೆಜೆಟೆಡ್ ಪ್ರತಾಂಕಿತ ಅಧಿಕಾರಿ(**Gazetted Officer**) ಗಳಿಂದ ದೃಡೀಕರಿಸಿ, ಸಂಬಂಧಪಟ್ಟ ಎಲ್ಲಾ ಪ್ರಮಾಣಪತ್ರಗಳನ್ನು **Pdf Format** ನಲ್ಲಿ ಅಪ್‌ಲೋಡ್ ಮಾಡಿದ ನಂತರ **Submit** ಮಾಡತಕ್ಕದ್ದು.

ಹಂತ 6:- ನಂತರ ಅರ್ಜಿ ಶುಲ್ಕವನ್ನು **Payment Using Net Banking, Credit Card, Debit Card, UPI** ಮುಖಾಂತರ ಅರ್ಜಿ ಶುಲ್ಕ ಮತ್ತು **Payment Gateway** ಚಾರ್ಜಸ್‌ನ್ನು ಪಾವತಿ ಮಾಡತಕ್ಕದ್ದು. ಶುಲ್ಕವನ್ನು ಪಾವತಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ: 16.10.2023 ರ ರಾತ್ರಿ 11.59 ರ ಒಳಗಾಗಿ ಪಾವತಿಸತಕ್ಕದ್ದು. ಇದನ್ನು ಹೊರತುಪಡಿಸಿ ಡಿ.ಡಿ, ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ. ಹಾಗೂ ಅರ್ಜಿ ಶುಲ್ಕವನ್ನು ನಿಗಧಿಪಡಿಸಿದ ದಿನಾಂಕ: 16.10.2023 ರಂದು ರಾತ್ರಿ 11.59 ಸಮಯದೊಳಗಾಗಿ ಸಲ್ಲಿಸದೇ ಇರುವಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಹಂತ 7:- ಅಭ್ಯರ್ಥಿಗಳು ನೇಮಕಾತಿ ಅರ್ಜಿ ಶುಲ್ಕವನ್ನು ಯಶ್ವಸಿಯಾಗಿ ಪಾವತಿಸಿದ 48 ಗಂಟೆಗಳ ನಂತರ **Print Application** ಗುಂಡಿಯನ್ನು ಒತ್ತಿ, **Download application** ಮೂಡಲಿದ್ದು, ಅಭ್ಯರ್ಥಿಗಳು ಅರ್ಜಿಯ ಪ್ರತಿಯನ್ನು ಕಡ್ಡಾಯವಾಗಿ **Download** ಮಾಡಿಕೊಳ್ಳತಕ್ಕದ್ದು, **CDCC Bank** ಅಪೇಕ್ಷಿಸಿದಾಗ ಈ ಪ್ರತಿಯನ್ನು ಹಾಜರುಪಡಿಸಬೇಕು.

**Note:-**

1.ಶುಲ್ಕವನ್ನು ಪಾವತಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ: 16.10.2023 ರ ರಾತ್ರಿ 11.59 ರ ನಂತರ ಶುಲ್ಕವನ್ನು ಸಂದಾಯ ಮಾಡಲು ಅವಕಾಶವಿರುವುದಿಲ್ಲ. ಡಿ.ಡಿ, ಪೋಸ್ಟಲ್ ಆರ್ಡರ್, ಮನಿ ಆರ್ಡರ್, ಇವುಗಳನ್ನು ಸ್ವೀಕರಿಸಲಾಗುವುದಿಲ್ಲ. ಶುಲ್ಕ ಸಂದಾಯ ಮಾಡದ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

2.ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೆ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ. ಅಥವಾ ಅದನ್ನು ಇತರೆ ಯಾವುದೇ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.

ಅಭ್ಯರ್ಥಿಗಳು ತಮ್ಮ ಅರ್ಜಿ ಸ್ಥಿತಿಯನ್ನು ತಿಳಿಯಬೇಕಾದಲ್ಲಿ. ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದ 7 ದಿನಗಳ ತರುವಾಯ ಬ್ಯಾಂಕಿನ ವೆಬ್‌ಸೆಟ್ www.chitradurgadccbank.com ಲಿಂಕ್ ನಲ್ಲಿ ದಾಖಲಿಸಿ, ಅರ್ಜಿಯು ಸಿಂಧುವಾಗಿರುವ ಬಗ್ಗೆ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ನಿಮ್ಮ ಅರ್ಜಿಯ ಮಾಹಿತಿ ಬ್ಯಾಂಕಿನ ವೆಬ್‌ಸೆಟ್‌ನಲ್ಲಿ ದೊರೆಯದಿದ್ದಲ್ಲಿ ಹಾಗೂ ನೀವು **ONLINE** ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ (**Help line**) **9019796412** ಗೆ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆಯಬಹುದು. ಮತ್ತು ಇ-ಮೇಲ್ helpdeskcdccb23@gmail.com ಮೂಲಕ ಮಾಹಿತಿ ಪಡೆಯಬಹುದು.

ಅಥವಾ

ಪಾವತಿಸಿದ ಶುಲ್ಕದ ವಿವರವುಳ್ಳ ಪ್ರತಿಯೊಂದಿಗೆ **Chitradurga District Central Co-operative Bank Ltd., D.C Office Road. Chitradura-577501** ಇಲ್ಲಿಗೆ ಸಂಪರ್ಕಿಸಬಹುದು.

(ಇಲ್ಯಾಸ್‌ಉಲ್ಲಾ ಷರೀಫ್)
ಸದಸ್ಯ ಸಂಚಲಾಕರು ನೇಮಕಾತಿ ಸಮಿತಿ ಹಾಗೂ
ಮುಖ್ಯಕಾರ್ಯನಿರ್ವಾಹಣಾಧಿಕಾರಿ
ಚಿತ್ರದುರ್ಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ..